

ಅರುಣ ಪಿ. ಭಟ್ಟ


## ವಾರಭವಿಷ್ಯ: 18.12.2025ರಿಂದ 24.12.2025ರವರೆಗೆ




ಶೈಕ್ಷಣಿಕ ಪ್ರಗತಿ ಇದೆ. ಆದಾಯ ಮೂಲದಿಂದ ಹೆಚ್ಚುವರಿಯಾಗಿ ಅನುಕೂಲ ಪಡೆಯಲಿದ್ದೀರಿ. ವೈಯಕ್ತಿಕ ಸಂಬಂಧಗಳು ಸುಮಧುರವಾಗಿ ಇರುತ್ತವೆ. ಇದರಿಂದ ನಿಮ್ಮ ಸಂತೋಷ ಹೆಚ್ಚಾಗಲಿದೆ. ಈ ಹಿಂದೆ ನೀವು ತೆಗೆದುಕೊಂಡ ನಕಾರಾತ್ಮಕ ನಿರ್ಧಾರಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತೀರಿ. ಖರ್ಚು ವೆಚ್ಚಗಳು ಹೆಚ್ಚಾಗಿ ಚಿಂತೆಗೆ ಕಾರಣ ಆಗಲಿದೆ. ಶುಭದಿನ: 22. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕೌಟುಂಬಿಕ ವಿಚಾರಗಳಲ್ಲಿ ಉತ್ತಮ ಪ್ರಗತಿ ಕಾಣಲಿದ್ದೀರಿ. ಬಂಡವಾಳ ಹೂಡಿಕೆಗೆ ಅವಕಾಶಗಳನ್ನು ಪರಿಶೀಲಿಸಿ ಯಶಸ್ಸು ಪಡೆಯುತ್ತೀರಿ. ಮದುವೆ ಸಂಬಂಧಗಳನ್ನು ಹುಡುಕುತ್ತಿದ್ದಲ್ಲಿ ಅದರಲ್ಲಿ ಯಶಸ್ಸು ಕಾಣುವ ಅವಕಾಶ ಹೆಚ್ಚಾಗಿದೆ. ಸಂಬಂಧಿಕರು ನಿಮ್ಮ ಸಹಾಯ ಕೇಳಿಕೊಂಡು ಬರಲಿದ್ದಾರೆ. ಅವರಿಗೆ ನಿಮ್ಮಿಂದ ಆದ ಸಹಾಯವನ್ನು ಮಾಡುವಿರಿ. ಶುಭದಿನ: 21. ಶ್ರೀಲಕ್ಷ್ಮೀನರಸಿಂಹ ಪಂಚರತ್ನ ಸ್ತೋತ್ರ ಪಠಿಸಿರಿ.





ನೀವು ನಂಬಿದ ವಿಚಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಬಹಳ ಶ್ರಮ ಪಡುತ್ತೀರಿ. ಸ್ನೇಹಿತರು ಸಾಲ ಕೇಳಿದರು ಎಂದು ತಕ್ಷಣ ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಬೇರೊಬ್ಬರು ನೀಡಿದ ದಾಖಲೆ ಪತ್ರಗಳನ್ನು ನೀವು ಕಳೆದುಕೊಳ್ಳುವ ಅಪಾಯವಿದೆ. ವಾಹನ ಚಾಲನೆ ಮಾಡುವಾಗ ಎಚ್ಚರ. ಶುಭದಿನ: 20. ಗಣೇಶ ಪಂಚರತ್ನ ಸ್ತೋತ್ರ ಪಠಣ ಮಾಡಿರಿ.





ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಕೋರ್ಟ್ ವ್ಯಾಜ್ಯಗಳಿದ್ದಲ್ಲಿ ಆ ಕಡೆ ಹೆಚ್ಚಿನ ಗಮನ ನೀಡಬೇಕು. ಇಲ್ಲದಿದ್ದಲ್ಲಿ ದೊಡ್ಡ ಮಟ್ಟದಲ್ಲಿ ನಷ್ಟ ಅನುಭವಿಸಬೇಕಾಗುತ್ತದೆ. ವ್ಯಾಪಾರದಲ್ಲಿ  ಉತ್ತಮ ಅವಕಾಶ ಬರುತ್ತವೆ. ಶುಭದಿನ: 22. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಹಿರಿಯರ ಮೆಚ್ಚುಗೆಯನ್ನು ಪಡೆಯುತ್ತೀರಿ. ಹಿರಿಯ ಅಧಿಕಾರಿಗಳು ಪರಿಣಾಮಕಾರಿಯಾದ ನಿಮ್ಮ ಕಾರ್ಯ ವೈಖರಿಯನ್ನು ಮೆಚ್ಚಿಕೊಳ್ಳುತ್ತಾರೆ. ಜೀವನದಲ್ಲಿ ಹೆಮ್ಮೆ ಪಡುವಂಥ ಸನ್ನಿವೇಶ ಇದಾಗಿರುತ್ತದೆ. ಕುಟುಂಬದಲ್ಲಿ ಸಂತಸ ಇರುತ್ತದೆ. ಶುಭದಿನ: 23. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ಈ ವಾರ ಕೆಲ ನಿಯಮಗಳನ್ನು ಅಳವಡಿಸಿಕೊಳ್ಳಲಿದ್ದೀರಿ. ಮಾರುಕಟ್ಟೆಯ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ. ಕೆಲವು ಕೆಲಸಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ನಿಮ್ಮ ಸೋದರ ಸೋದರಿಯರು ಸಹಾಯಕ್ಕೆ ನಿಲ್ಲುತ್ತಾರೆ. ಮನೆಯಲ್ಲಿ ಸಂತಸದ ವಾತಾವರಣ ಇರುತ್ತದೆ. ಸಮಾಜದಲ್ಲಿ ಅತಿ ಮುಖ್ಯವಾದ ಹುದ್ದೆಗೆ ನಿಮ್ಮ ಹೆಸರನ್ನು ಸೂಚಿಸುವ ಸಾಧ್ಯತೆ ಇದೆ. ಶುಭದಿನ: 22. ಆದಿತ್ಯ ಹೃದಯ ಪಠಿಸಿರಿ.





ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳಬೇಕಾದ ಅಗತ್ಯ ಇರುತ್ತದೆ. ನಿಮ್ಮ ಸಂಸ್ಥೆಯ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೆಲವು ಸೂತ್ರಗಳನ್ನು ರೂಪಿಸಲಿದ್ದೀರಿ. ಇದು ಒತ್ತಡವಾಗಿ ಪರಿಣಮಿಸಿ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಶುಭದಿನ: 21. ಚಂಡಿ ಪಾರಾಯಣ ಮಾಡಿರಿ.





ವಾರದ ಮೊದಲ ಭಾಗದಲ್ಲಿ ಮುಖ್ಯವಾದ ಕೆಲಸಗಳನ್ನು ಮುಗಿಸಿಕೊಳ್ಳಿ. ಗುಣಮಟ್ಟದ ನಿರ್ಧಾರ ಹಾಗೂ ಆಲೋಚನೆಗಳಿಂದ ಮೆಚ್ಚುಗೆಗೆ ಪಾತ್ರರಾಗುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಹೊಸ ಕೆಲಸಕ್ಕೆ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಹೆಚ್ಚಿಸಬೇಕು. ಶುಭದಿನ: 20. ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿರಿ.





ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ತುಂಬ ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಮಾಧಾನ ಹಾಗೂ ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಶುಭದಿನ: 19. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲಿ ವೃತ್ತಿಪರರಿಗೆ ಒಳ್ಳೆಯ ಅವಕಾಶ. ದೊಡ್ಡ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಆಸೆ ಪೂರೈಸುತ್ತದೆ. ವೃತ್ತಿಪರ ಕಾರಣಗಳಿಗೆ ಸ್ಥಳಾಂತರ ಆಗುವ ಸಾಧ್ಯತೆಗಳಿವೆ. ಸಂಗಾತಿ ಜತೆಗೆ ಸಂತಸದ ಸಮಯ ಕಳೆಯಲಿದ್ದೀರಿ. ವೃತ್ತಿಪರ ಚಟುವಟಿಕೆಗಳ ಮಧ್ಯೆ ಗೊಂದಲ ಏರ್ಪಡಲಿದೆ. ಅಧಿಕಾರಿಗಳ ಜತೆಗೆ ಭಿನ್ನಾಭಿಪ್ರಾಯ ಕಾಣಿಸಿಕೊಳ್ಳಬಹುದು. ಶುಭದಿನ: 21. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.




ನಿಮ್ಮ ಕೌಶಲವನ್ನು ಹೆಚ್ಚು ಮಾಡಿಕೊಳ್ಳುತ್ತೀರಿ. ವಿವಿಧ ಮೂಲಗಳಿಂದ ಸಂಪತ್ತು ಸಂಗ್ರಹ ಆಗುತ್ತದೆ. ಅದಕ್ಕೆ ತಕ್ಕಂತೆ ನಿಮ್ಮ ಬಜೆಟನ್ನು ರೂಪಿಸಿಕೊಳ್ಳಬಹುದು. ವೈಯಕ್ತಿಕ ಸಂಬಂಧವು ಸೌಹಾರ್ದಯುತವಾಗಿ ಇರುತ್ತದೆ. ವಾರದ ಮಧ್ಯ ಭಾಗದಲ್ಲಿ ಪ್ರೀತಿಪಾತ್ರರಿಗೆ ಮತ್ತಷ್ಟು ಹತ್ತಿರವಾಗುತ್ತೀರಿ. ಆಸ್ತಿ ಹಾಗೂ ಭೂಮಿ ವ್ಯವಹಾರದಿಂದ ಲಾಭ ಪಡೆಯಲಿದ್ದೀರಿ. ಶುಭದಿನ: 20. ಗೋಪೂಜೆ ಮಾಡಿ. ಶಿವಕವಚ ಪಠಿಸಿರಿ.




ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಬಡ್ತಿ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ವಾರದ ಮಧ್ಯ ಭಾಗದಲ್ಲಿ ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಆರೋಗ್ಯವು ಚೆನ್ನಾಗಿರುತ್ತದೆ.  ಕಾನೂನು ವ್ಯಾಜ್ಯಗಳು ಇದ್ದಲ್ಲಿ ಹೋರಾಟ ತೀವ್ರವಾಗುತ್ತದೆ.  ಶುಭದಿನ: 19. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ ಪಠಿಸಿರಿ.